# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 12.10.2021 ರಂದು ಬೆಳಿಗ್ಗೆ 11.30 ಘಂಟೆಗೆ Ward ಸಮಿತಿ ಸಭೆಯನ್ನು 190–ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ)ಯಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಚಂದ್ರರೆಡ್ಡಿ | ಸದಸ್ಯರು | 9980480549 |
| 4 | ಶ್ರೀ ಉಮೇಶ್.ಎಸ್ | ಸದಸ್ಯರು | 9342509899 |
| 5 | ಶ್ರೀ ರಾಘವೇಂದ್ರ | ಸ್ವಯಂ ಸೇವಕರು | 9845645257 |
| 6 | ಶ್ರೀ ಮೌಲಸಾಬ್ | ಸ್ವಯಂ ಸೇವಕರು | 9902882630 |
| 7 | ಡಾ|| ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) | 9242832196 |
|  | ಡಾ|| ಮಾಧವಿ | ಪ್ರಾ.ಆ.ಕೇಂ (ವೈದ್ಯರು) | 9242832196 |
| 8 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿ | 9480685984 |
| 9 | ಶ್ರೀ ಸಾಯಿಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845444039 |
| 10 | ಶ್ರೀ ವಿಜಯಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ | 9449840469 |
| 12 | ಶ್ರೀ ಹೊನ್ನೂರ್ ಬಾಷ | ಕಿರಿಯ ಆರೋಗ್ಯ ಪರಿವೀಕ್ಷಕರು | 9945145661 |
| 13 | ಶ್ರೀ ಹೆಚ್. ನರಸಪ್ಪ | ತೋಟಗಾರಿಕೆ ಸಹಾಯಕರು | 8105663239 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಿದ್ದರು.

N. Rajagopalababu

(ಮು.ತಿ.ನೋ)

Scanned with

- **<u>ತೋಟಗಾರಿಕೆ ಇಲಾಖೆ</u>**

1. ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಹಿರಿಯ ಅಧಿಕಾರಿಗಳು ಬಾರದೆ ಸಭೆಗೆ ಮಾಹಿತಿ ಇಲ್ಲದ ಕೆಳಹಂತದ ಅಧಿಕಾರಿಗಳನ್ನು ಕಳುಹಿಸುವುದನ್ನು ಆಕ್ಷೇಪಿಸಿದರು ಈ ಬಗ್ಗೆ ತೋಟಗಾರಿಕೆ ಇಲಾಖೆ ಅಧೀಕ್ಷಕರಾದ ಶ್ರೀ ಚಂದ್ರಶೇಖರ ರವರು ಹಲವಾರು ಬಾರಿ ಸಭೆಗೆ ಹಾಜರಾಗಲು ಸೂಚಿಸಿದ್ದರು ಹಾಜರಾಗದೆ ಕೆಳಹಂತದ ಅಧಿಕಾರಿಗಳನ್ನು ಕಳುಹಿಸಿದ್ದರು ಸದಸ್ಯರು ಕೇಳವ ಪ್ರಶ್ನೆಗಳಿಗೆ ಉತ್ತರ ನೀಡದೆ ಮೌನಿಕವಾಗಿ ಕುಳಿತಿರುವುದಕ್ಕೆ ಬೇಸರವ್ಯಕ್ತ ಪಡಿಸಿ ಮುಂದಿನ ಸಭೆಗೆ ಶ್ರೀ ಚಂದ್ರಶೇಖರ ರವರಿಗೆ ಸಭೆಗೆ ಹಾಜರಾಗಲು ಹಾಜರಿದ್ದ ಕಾರ್ಯದರ್ಶಿಗಳಿಗೆ ಕೋರಿದರು. ಇದಕ್ಕೆ ನೋಡಲ್ ಅಧಿಕಾರಿಗಳು ಸಭೆಗೆ ಮುಂದಿನ ಸಭೆಗೆ ಶ್ರೀ ಚಂದ್ರಶೇಖರ ರವರಿಗೆ ಸಭೆಗೆ ಕರೆಸುವುದಾಗಿ ಸದಸ್ಯರುಗಳಿಗೆ ತಿಳಿಸಿದರು.
2. ವಾರ್ಡ್ ಕಮಿಟಿ ಸದಸ್ಯರಾದ ಚಂದ್ರರೆಡ್ಡಿ ರವರು ವಾರ್ಡ್ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಲ್ಲಿ ಪಾದಚಾರಿ ಮಾರ್ಗ ನಿರ್ಮಿಸಲು ಹಾಗೂ ಉದ್ಯಾನವನಗಳಲ್ಲಿ ಸಸಿಗಳ ನಿರ್ವಹಣೆಯಾಗುತ್ತಿಲ್ಲವೆಂದು ತಿಳಿಸಿದರು. ಹಾಗೂ ಸ್ವಯಂ ಸೇವಕರಾದ ಮೌಲಸಾಬ ರವರು ಸಹ ಉದ್ಯಾನವನಗಳಲ್ಲಿ ಸಸಿಗಳನ್ನು ನಿರ್ವಹಣೆ ಮತ್ತು ಬೆಳೆದಿರುವ ಹುಲ್ಲನ್ನು ಸಹ ಕತ್ತರಿಸುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಸಿಬ್ಬಂದಿ ನರಸಪ್ಪ ರವರಿಗೆ ಸಭೆಯಲ್ಲಿ ತಿಳಿಸಿದ್ದರು.

- **<u>ಆರೋಗ್ಯ ಇಲಾಖೆ (ಕೋವಿಡ್–19)</u>**

1. ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಡಾ|| ಯೋಗೇಶ್ ಮತ್ತು ಶ್ರೀಮತಿ ಮಾಧವಿ ರವರು ಕೋವಿಡ್–19ರ ಲಸಿಕೆ ನೀಡುವುದರಲ್ಲಿ ಮತ್ತು ಎಲ್ಲಾ ವಿಷಯಗಳಲ್ಲಿ ಮಂಗಮ್ಮನಪಾಳ್ಯ ವಾರ್ಡ್ ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಮೊದಲನೆ ಸ್ಥಾನದಲ್ಲಿದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಕೆಯ ಅಧಿಕಾರಿ/ಸಿಬ್ಬಂದಿ. ಕಮಿಟಿ ಸದಸ್ಯರುಗಳು ಮುಚ್ಚುಗೆ ವ್ಯಕ್ತಪಡಿಸಿ ವೈದ್ಯರುಗಳಿಗೆ ಶ್ಲಾಗಿಸಿದರು ಶ್ರೀ ಉಮೇಶ್ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವ ವೈದ್ಯರ. ನರ್ಸಗಳ. ಹಾಗೂ ಇತರೆ ಸಿಬ್ಬಂದಿ ವರ್ಗವದವರ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಕೋರಿದರು. ಶ್ರೀ ರಾಘವೇಂದ್ರ. ಶ್ರೀ ಉಮೇಶ್ ರವರು ಮಂಗಮ್ಮನಪಾಳ್ಯ ವಾರ್ಡ್ ವ್ಯಾಪ್ತಿಯಲ್ಲಿ ನಕಲಿ ವೈದ್ಯರ ಹಾವಳಿ ಜಾಸ್ತಿ ಆಗಿದೆ ಮತ್ತು ಹೊಸಪಾಳ್ಯ ಗಾರ್ವೆಭಾವಿಪಾಳ್ಯ ಹಾಗೂ ವಾರ್ಡಿನ ಎಲ್ಲಾ ಕಡೆಗಳಲ್ಲಿ ನಕಲಿ ಆಸ್ಪತ್ರೆಗಳ ಸಂಖ್ಯೆ ಜಾಸ್ತಿ ಆಗಿದೆ ಎಂದು ಸಭೆಯ ಗಮನಕ್ಕೆ ತಂದರು. ಈ ಆಸ್ಪತೆಗಳಲ್ಲಿ ಸಾರ್ವಜನಿಕರಿಗೆ ಸ್ಟಿರಾಯ್ಡ್ ನಂತಹ ಅಪಾಯಕಾರಿ ಔಷದಿ ನೀಡುತ್ತಿರುತ್ತಾರೆ ಎಂದು ತಿಳಿಸಿದ್ದರು ಹಾಗೂ ಶ್ರೀ ಉಮೇಶ್ ರವರು ಇಂತಹ ನಕಲಿ ಖಾಸಗಿ ಆಸ್ಪತ್ರೆಗಳನ್ನು ದಾಳಿ ಮಾಡಿ ನಕಲಿ ವೈದ್ಯರನ್ನು ಕಂಡು ಹಿಡಿಯಬೇಕು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಂದೇ ಪರವಾನಗಿಯಿಂದ 10 ಔಷದಿ ಅಂಗಡಿಗಳನ್ನು ತೆರೆದಿರುತ್ತಾರೆ ಇದೊಂದು ಮೆಡಿಕಲ್ ಮಾಫಿಯಾ ಎಂದು ಸಭೆಯಲ್ಲಿ ಸ್ವಯಂ ಸೇವಕರಾದ ಶ್ರೀ ಮೌಲಸಾಬ್ ರವರು ಹಾಜರಿದ್ದ ವೈದ್ಯರಿಗೆ ಕ್ರಮಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ವೈದ್ಯರು ರವರು ತಿಳಿಸಿದರು.

- **ಬೀದಿ ದೀಪ**

1. ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ಚಂದ್ರರೆಡ್ಡಿ ಹಾಗೂ ಸ್ವಯಂ ಸೇವಕರಾದ ಮೌಲಸಾಬ್ ರವರು ವಾರ್ಡ್ ವ್ಯಾಪ್ತಿಯಲ್ಲಿ ಹೊಸ ಬೀದಿ ದೀಪಗಳನ್ನು ಹಾಗೂ ಬೀದಿ ದೀಪಗಳ ನಿರ್ವಹಣೆ ಮತ್ತು ಟೈಮರ್‌ಗಳನ್ನು ಅಳವಡಿಸುವಂತೆ ವಾರ್ಡ್ ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರಾದ ಶ್ರೀ ರಮೆಶ್ ರವರು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **<u>ಕಾಮಗಾರಿ ಇಲಾಖೆ:</u>**

1. ವಾರ್ಡ್ ಸದಸ್ಯರು ಮತ್ತು ನಾಗರೀಕರ ಮನವಿಯಂತೆ ವಾರ್ಡ್ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳಾದ ವರ್ಡ್ ರಸ್ತೆ ನಿರ್ವಹಣೆ. ಚರಂಡಿಗಳ ನಿರ್ವಹಣೆ ಮತ್ತು ರಸ್ತೆಗಳ ಅಭಿವೃದ್ಧಿ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾನ್ಯ ಶಾಸಕರ ಗಮನಕ್ಕೆ ತಂದು ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಹಾಜರಿದ್ದ ವಾರ್ಡ್ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು

N. Rajagopalachar

Scanned with

2. ಶ್ರೀ ಚಂದ್ರರೆಡ್ಡಿ ಮತ್ತು ರಾಘವೇಂದ್ರ ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸ್ಮಶಾನಗಳ ಅಭಿವೃದ್ಧಿಗೆ ಮತ್ತು ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಲು ರೂ. 2.50 ಕೋಟಿಯನ್ನು ಮೀಸಲಿಡುವಂತೆ ಕೋರಿರುತ್ತಾರೆ. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ಕೂಡಲೇ ಸ್ಥಳ ಪರಿವೀಕ್ಷಣೆ ಮಾಡಿ ಅಂದಾಜು ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸಿ ಕ್ರಮಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಮುಂಚಿತವಾಗಿ ರಸ್ತೆಗಳನ್ನು ಅಗೆಯುವ ಕೆಲಸವನ್ನು ನಿರ್ವಹಿಸಲು ಕೊಳ್ಳಲು ಗೈಲ್, ಏರ್‌ಟೆಲ್, ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ ನಂತಹ ಇಲಾಖೆಗಳಿಗೆ ಪತ್ರವನ್ನು ಬರೆಯುವಂತೆ ವಾರ್ಡ್ ಸದಸ್ಯರಾದ ಶ್ರೀ ಚಂದ್ರರೆಡ್ಡಿ ರವರು ಸಭೆಯ ಗಮನಕ್ಕೆ ತಂದರು. ಈ ಮೇಲಿನ ಎಲ್ಲಾ ವಿಷಯಗಳಿಗೆ ವಾರ್ಡ್‌ನ ಸಹಾಯಕ ಅಭಿಯಂತರರು ರವರು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರು.

- **<u>ಬಿ.ಡಬ್ಲ್ಯೂ.ಎಸ್.ಎಸ್.ಬಿ :</u>**

1. ಶ್ರೀ ಉಮೇಶ್ ಸದಸ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಮ್ಯಾನ್‌ಹೋಲ್‌ಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮಳೆ ಬಿದ್ದ ಸಂದರ್ಭದಲ್ಲಿ ಮ್ಯಾನ್‌ಹೋಲ್‌ಗಳನ್ನು ತುಂಬಿ ರಸ್ತೆಯ ಮೇಲ್ಭಾಗದಲ್ಲಿ ಹರಿಯುತ್ತಿರುತ್ತದೆ. ಹಾಗೂ ಮ್ಯಾನ್‌ಹೋಲ್‌ಗಳಲ್ಲಿ ವಿಷಪೂರಿತ ದ್ರವ ತುಂಬಿ ಹರಿಯುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.
2. ಉಜಾಲ್ ಫ್ಯಾಕ್ಟರಿಯಿಂದ ರಾಮಚಂದ್ರ ಬಡಾವಣೆ, ಹೊಸಪಾಳ್ಯ ಮತ್ತು ಮಂಗಮ್ಮನಪಾಳ್ಯದಿಂದ ಮಳೆ ನೀರು ನೇರವಾಗಿ ಮದೀನ ನಗರ ಗಂಗಮ್ಮ ದೇವಸ್ಥಾನದ ರಸ್ತೆಗೆ ಹರಿದು ಬರುತ್ತಿದೆ ಇದ್ದರಿಂದ ಮದೀನ ನಗರದಲ್ಲಿ ತುಂಬ ಅವ್ಯವಸ್ಥೆ ಆಗಿದೆ ಎಂದು ಹಾಗೂ ಈಗಾಗಲೇ ಬಿಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯಿಂದ ಅಳವಡಿಸುತ್ತಿರುವ ಪೈಪ್‌ಗಳ ಗಾತ್ರ ತುಂಬ ಕಿರಿದಾಗಿದ್ದು. ಅವುಗಳನ್ನು ಬದಲಾಯಿಸುವಂತೆ ಸ್ವಯಂ ಸೇವಕರಾದ ಶ್ರೀ ರಾಘವೇಂದ್ರ ಮತ್ತು ಮೌಲಸಾಬ್ ರವರು ಕೋರಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಾಯಿಬಣ್ಣ ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ ರವರು ಒಂದು ತಿಂಗಳಲ್ಲಿ ಕ್ರಮಕ್ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **<u>ಪಶುಸಂಗೋಪನೆ ಇಲಾಖೆ:</u>**

1. ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಉಮೇಶ್ ರವರು ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳಿಗೆ ರಸ್ತ್ರಚಿಕಿತ್ಸೆ ಸರಿಯಾಗಿ ಪಶುಸಂಗೋಪನೆ ಇಲಾಖೆಯಿಂದ ನಡೆಸುತ್ತಿಲ್ಲವೆಂದು ಇದ್ದರಿಂದ ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
2. ಶ್ರೀ ರಾಘವೇಂದ್ರ ರವರು ವಾರ್ಡ್‌ನ ಇಂದಿರಾ ಕ್ಯಾಂಟೀನ್ ಹತ್ತಿರ ಸುಮಾರು 50 ಕಿಂತ ಹೆಚ್ಚು ನಾಯಿಗಳು ಇದೆ ಎಂದು ಹೇಳಿದರು. ಈ ನಾಯಿಗಳನ್ನು ಹಿಡಿದು ಅಪರೇಷನ ಮಾಡಲು ತಿಳಿಸಿದರು. ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಪಶುಸಂಗೋಪನೆ ಅಧಿಕಾರಿಗಳಾದ ಶ್ರೀ ಸುಧೀರ್ ರವರಿಗೆ ಸಾರ್ವಜನಿಕರ ಕರೆಗಳನ್ನು ಸ್ವೀಕರಿಸುವಂತೆ ಸೂಚಿಸಿ ಕೂಡಲೇ ಸಮಸ್ಯೆಗಳನ್ನು ನಿವಾರಿಸಲು ಸೂಚಿಸಿರು.

- **<u>ಕಂದಾಯ ಇಲಾಖೆ</u>**

1. ವಾರ್ಡ್ ವ್ಯಾಪ್ತಿಯಲ್ಲಿ ಸರ್ವೆ ಸಂಖ್ಯೆ: 44ರಲ್ಲಿ 4.20 ಗುಂಟೆ ಜಮೀನನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಮೀಸಲಿಟ್ಟಿರುವುದು ಕಂಡು ಬಂದಿರುತ್ತದೆ. ಈ ಜಮೀನನ್ನು ಉಪಯೋಗಿಸಿಕೊಳ್ಳಲು ಸದರಿ ಇಲಾಖೆಗೆ ಪತ್ರ ಬರೆಯುವಂತೆ ಸದಸ್ಯರು ಮತ್ತು ಸ್ವಯಂ ಸೇವಕರಾದ ಶ್ರೀ ಮೌಲಸಾಬ್ ರವರು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಗಳ ಹಾಗೂ ವಾರ್ಡ್ ಗಮನಕ್ಕೆ ತಂದರು. ಈ ಬಗ್ಗೆ ಪರಿಶೀಲಿಸಲಿ ಕ್ರಮ ಕೈಗೊಳ್ಳಲಾಗುವುದೆಂದು ಸಹಾಯಕ ಕಂದಾಯ ಅಧಿಕಾರಿಗಳ ತಿಳಿಸಿದರು.

N. Rajashekaraiah

Scanned with

**<u>ಬೆಸ್ಕಾಂ ಇಲಾಖೆ</u>**

1. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳಲ್ಲಿ ಇಂಟರ್‌ನೆಟ್ ಕೇಬಲ್‌ಗಳನ್ನು ಅಳವಡಿಸಿದ್ದು, ಸದರಿ ಇಂಟರ್‌ನೆಡ್ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಸದಸ್ಯರಾದ ಉಮೇಶ್ ಮತ್ತು ಮೌಲಸಾಬ್ ರವರು ವಾರ್ಡ್ ಗಮನಕ್ಕೆ ತಂದರು ಹಾಗೂ ಶ್ರೀ ಚಂದ್ರರೆಡ್ಡಿ ರವರು ಸರ್ಕಾರದ ನಿಯಮಾವಳಿಗಳಂತೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀ ವಿಜಯ ಕುಮಾರ್ ರವರಿಗೆ ಕೋರಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

7. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
8. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
9. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
10. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
11. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
12. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with